RNU AIR DHARWAD

MAY 29, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ 'ಮನ್ ಕಿ ಬಾತ್'ನ 134ನೇ ಆವೃತ್ತಿ, ನಾಡಿದ್ದು 31 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ನಾಗರಿಕರು ತಮ್ಮ ಅಭಿಪ್ರಾಯಗಳನ್ನು, My Gov.in ಜಾಲತಾಣ ಅಥವಾ 1800–11–7800 ಸಂಖ್ಯೆಗೆ ಕರೆ ಮಾಡಿ, ಹಂಚಿಕೊಳ್ಳಲು, ಇಂದು ಕೊನೆ ದಿನವಾಗಿದೆ. ರಾತ್ರಿ 11.45 ರೊಳಗೆ, ನಾಗರಿಕರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು.

<><><>

**ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್,** ಎರಡು ದಿನಗಳ ರಾಜ್ಯ ಪ್ರವಾಸವ ಕೈಗೊಂಡಿದ್ದಾರೆ. ಇಂದು ಬೆಳಗ್ಗೆ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿಳಿದ ಉಪ ರಾಷ್ಟ್ರಪತಿಯವರನ್ನು, ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ ಸ್ವಾಗತಿಸಿ, ಬರಮಾಡಿಕೊಂಡರು. ಬೆಂಗಳೂರು, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ, 45 ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ, ಉಪರಾಷ್ಟ್ರಪತಿಯವರು, ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದರು. ಈ ಮಧ್ಯಾಹ್ನ 12.30ಕ್ಕೆ, ಬೆಳಗಾವಿಯ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ, ಅಂಗ ಸಂಸ್ಥೆ, ದಾವಣಗೆರೆಯ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನ, 'ಅಮೃತ ಮಹೋತ್ಸವ' ಸಮಾರಂಭದಲ್ಲಿ, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃ ್ಣನ್ ಪಾಲ್ಗೊಳ್ಳಲಿದ್ದಾರೆ.

<><><>

**ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲೂಕು,** ನಿಲೋಗಲ್ಲ ಗ್ರಾಮದಲ್ಲಿ, ಮಾವು, ನಿಂಬೆ, ನೇರಳೆ ಹಾಗೂ ತೆಂಗು ಬೆಳೆ ಜೊತೆ, ಜೇನು ಕೃಷಿ ಕೈಗೊಂಡು ಇಳುವರಿ ಹೆಚ್ಚಿಸಿಕೊಂಡಿದ್ದಾರೆ ಕೃಷಿಕ ಶ್ರೀನಿವಾಸ ಜಾಲಿಹಾಳ. ಅವರ ತೋಟಗಾರಿಕೆ ಬೆಳೆ ಉತ್ಪಾದಕತೆ ಕುರಿತು, ಜಿಲ್ಲಾ ಕೃಷಿ ವಿಸ್ತರಣಾ, ಶಿಕ್ಷಣ ಕೇಂದ್ರದ ಮುಖ್ಯಸ್ಥ, ಡಾಕ್ಟರ ಪಿ.ಆರ್ ಬದರಿಪ್ರಸಾದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜೇನು ಕೃಷಿಯೊಂದಿಗೆ, ನೈಸರ್ಗಿಕ ಮಾವು ಬೆಳೆಗೆ ಹೆಚ್ಚಿನ ಆದ್ಯತೆ ನೀಡಿರುವ ಶ್ರೀನಿವಾಸ ಜಾಲಿಹಾಳ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ,

<><><>

**ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ,** "ಮಕ್ಕಳಿಗೆ ಬಿತ್ತನೆಯಿಂದ ಬೆಳೆಯ ವರೆಗೆ: ಕೃಷಿ ಪಯಣ" ಬೇಸಿಗೆ ಶಿಬಿರ, ಇಂದು, ಸಮಾರೋಪಗೊಳ್ಳಲಿದೆ.

<><><>

**ಕೇಂದ್ರ ಗ್ರಾಮೀಣಾಭಿವೃದ್ಧಿ ಖಾತೆ ಸಚಿವ,** ಶಿವರಾಜ ಸಿಂಗ್ ಚೌವಾಣ್, ಹೊಸದಿಲ್ಲಿಯಲ್ಲಿ, ವಿಡಿಯೋ ಸಂವಾದದ ಮೂಲಕ, ಪ್ರಧಾನಮಂತ್ರಿ ಗ್ರಾಮೀಣ ಆವಾಸ ಯೋಜನೆ ಅಡಿ, ಕರ್ನಾಟಕ ಸೇರಿದಂತೆ, ಒಟ್ಟು 12 ರಾಜ್ಯಗಳಿಗೆ, 10 ಸಾವಿರದ 21 ಕೋಟಿ ರೂಪಾಯಿ ಬಿಡುಗಡೆ ಮಾಡಿದರು.

<><><>

**ಉತ್ತರ ಕನ್ನಡ ಜಿಲ್ಲೆ, ಭಟ್ಕಳದಲ್ಲಿ, ಇತ್ತೀಚೆಗೆ** ಕಪ್ಪೆ ಚಿಪ್ಪು ಸಂಗ್ರಹ ಸಂದರ್ಭ ನೀರುಪಾಲಾಗಿ, ಮೃತ ಪಟ್ಟ ಹನ್ನೊಂದು ಜನರ ಕುಟುಂಬಸ್ಥರಿಗೆ, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಪರಿಹಾರ ಧನವನ್ನು ಹಸ್ತಾಂತರಿಸಿದರು. ರಾಜ್ಯ ಸರ್ಕಾರ ತಲಾ 5 ಲಕ್ಷ ರೂಪಾಯಿಗಳಂತೆ, ಒಟ್ಟು 55 ಲಕ್ಷ ರೂಪಾಯಿ, ಮೀನುಗಾರಿಕೆ ಇಲಾಖೆ, ತಲಾ 10 ಲಕ್ಷ ರೂಪಾಯಿಗಳಂತೆ, 11 ಕುಟುಂಬಸ್ಥರಿಗೆ, ಒಟ್ಟು 1 ಕೋಟಿ 10 ಲಕ್ಷ ರೂಪಾಯಿ ಪರಿಹಾರ ಘೋಷಿಸಿತ್ತು. ಪರಿಹಾರದ ಚೆಕ್ ಗಳನ್ನು, ಇಂದು ಬೆಳಗ್ಗೆ ಸಂತ್ರಸ್ತರ ಮನೆಗಳಿಗೆ ತೆರಳಿ ಸಚಿವರು, ಹಸ್ತಾಂತರಿಸಿದರು. ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೇರಿದಂತೆ ಗಣ್ಯರು ಇದ್ದರು.

<><><>

**ನಾಡಿದ್ದು, ಮೇ 31 ರಂದು,** ವಿಶ್ವ ತಂಬಾಕು ಮುಕ್ತ ದಿನಾಚರಣೆ. ಜೂನ್ 1 ರಿಂದ ಜೂನ್ 30 ರ ವರೆಗೆ, ಒಂದು ತಿಂಗಳ ಕಾಲ, ರಾಜ್ಯಾದ್ಯಂತ, "ಆಕ ್ಷಕ ಮುಖವಾಡವನ್ನು ಕಳಚುವುದು: ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ತೊರೆಯುವುದು", ಎಂಬ ಧ್ಯೇಯದೊಂದಿಗೆ, ಯುವ ಪೀಳಿಗೆಯನ್ನು ತಂಬಾಕು ಮುಕ್ತಗೊಳಿಸುವ, ಅಭಿಯಾನ ಆಯೋಜಿತವಾಗಿದೆ.

<><><>

**ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ,** ಧಾರವಾಡ ಜಿಲ್ಲೆ, ಹುಬ್ಬಳ್ಳಿ ಘಟಕ, ಕರ್ನಾಟಕ ರಾಜ್ಯ ಸರ್ಕಾರ ಹೊರಡಿಸಿರುವ, 2026–27ರ ಕನಿಷ್ಠ ವೇತನ ಕರಡು ಅಧಿಸೂಚನೆಯನ್ನು ಅಧ್ಯಯನ, ಅಭಿಪ್ರಾಯ ಕ್ರೋಢೀಕರಿಸಲು ಮತ್ತು ಸರ್ಕಾರಕ್ಕೆ ಏಕೀಕೃತ ಪ್ರಾತಿನಿಧಿಕ ಪ್ರಸ್ತಾವ ಸಿದ್ಧಪಡಿಸಲು, ವಿಶೇಷ ಸಭೆ

ಆಯೋಜಿಸಿದೆ.ಇಂದು ಸಂಜೆ, ನಾಲ್ಕು ಗಂಟೆಗೆ, ಸಂಸ್ಥೆಯ ಚಂದ್ರವದನ ದೇಸಾಯಿ ಸಭಾಭವನದಲ್ಲಿ, ಉದ್ಯಮಿಗಳು, ಕೈಗಾರಿಕಾ ಸಂಘ ಹಾಗೂ ವ್ಯಾಪಾರಸ್ಥರ ಸಭೆ ನಡೆಯಲಿದೆ.

<><><>

**U.G. C.E.T -2026, ಸೀಟು ಹಂಚಿಕೆ** ಬಗ್ಗೆ, ಜಾಗೃತಿ ಮೂಡಿಸಲು, ರಾಜ್ಯದ 65 ಸರ್ಕಾರಿ ಹಾಗೂ ಅನುದಾನಿತ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ, ದಂತ ವೈದ್ಯಕೀಯ ಕಾಲೇಜುಗಳಲ್ಲಿ, ನಾಳೆ 30ನೇ ತಾರೀಖಿನ ವರೆಗೆ, ಮಂಥನ ಕಾರ್ಯಕ್ರಮ,ಆಯೋಜಿಸಲಾಗಿದೆ.cetonline.karnataka.gov.in/manthana2026 ಕೊಂಡಿ ಬಳಸಿ, ಹೆಸರು ನೋಂದಾಯಿಸಿ ಪಾಲ್ಗೊಳ್ಳುವಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ, ಕಾರ್ಯನಿರ್ವಾಹಕ ನಿರ್ದೇಶಕ, ಎಚ್.ಪ್ರಸನ್ನ, ಕೋರಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>